ಮುಂಬೆಳಕು, ಚೆಂಬಳಕು, ಹೊಂಬೆಳಕು,
ಹೂ -ಬೆಳಕು,
ತುಳುಕಿತೊ ತುಳುಕಿತು ಎಲ್ಲೆಡೆಗೆ ಬೆಳಕು!
ಎಂಥ ದೃಷ್ಟಿ ಸಂಜೀವಿನೀ ಬೆಳಕು,
ಚೈತನ್ಯ ದಾಯಿನೀ ಬೆಳಕು,
ಹರ್ಷೋತ್ಸಾಹ ಸಂವರ್ಧಿನೀ ಬೆಳಕು!
ನಿನ್ನ ಈ ಬಂಗಾರ  ಬೆಳಕಿನಲ್ಲಿ,
ನನ್ನ ಮೈ ಬಣ್ಣದ ಬಗ್ಗೆ ನನಗೇ ಕೌತುಕ,
ನನಗೆ ನಾನೇ ಮೋಹಕ
ಸ್ವತಂತ್ರಧೀರ ಸಿದ್ದೇಶ್ವರ!.



ಕಾವ್ಯಾನಂದ ರ 'ವಚನಾರಾಮ' ದಿಂದ
ಆಯ್ದ ವಚನ

ಎಲ್ಲಾ ಶ್ರಮಿಕ ವರ್ಗದವರಿಗೆ
ಕಾರ್ಮಿಕರ ದಿನದ ಶುಭಾಶಯಗಳು

## ದುಡಿವ ಕೈಗಳಿಗೆ ನಮೋ ನಮೋ



ದುಡಿವ ಕೈಗಳಿಗೆ ನಮೋ ನಮೋ
ಕೊಡುವ ಕೈಗಳಿಗೆ ನಮೋ ನಮೋ
ಬೇಡದೆ ಕಾಡದೆ ದುಡಿದಷ್ಟನ್ನೇ
ಪಡೆವ ಕೈಗಳಿಗೆ ನಮೋ ನಮೋ

ಕಾವ್ಯಾನಂದ ರ 'ಚರಗ' ಕೃತಿ ಯಿಂದ ಆಯ್ದ ಕವನ

## ಎಲ್ಲರಿಗೂ ವಿಶ್ವ ಕಾರ್ಮಿಕರ ದಿನದ ಶುಭಾಶಯಗಳು

ಎನಿತು ಸುಂದರ ವಸುಂಧರೆಯ

ಸೃಷ್ಟಿಸಿಹೆಯಯ್ಯ, ನಮಗಾಗಿ !

ಹಕ್ಕಿ ಚಿಕ್ಕೆಗಳು, ಗರಿ ದರಿ ತೊರೆ ಕೆರೆಗಳು,

ಹಸು ಬಸವಗಳು, ಹೊಲ ಗದ್ದೆ ತೋಟ ಪಟ್ಟಿಗಳು -

ಆವುದನು ಬಣ್ಣಿಸುವುದು, ಯಾವುದನ್ನು ಬಿಡುವುದು?

ಕರಿಕೆಯಿಂದ ತಾರಕಿಯವರೆಗೆ

ಕುರೂಪವ ಬದಿಗೊತ್ತಿ ಸುರೂಪದ ಸೂರೆ,

ಕಣಕಣಗಳಿಂದ ಅಮೃತದ ಧಾರೆ !


ಈ ಸರ್ವಸುಂದರ ವಸುಂಧರೆಯಲ್ಲಿ

ಅಸುಂದರವಾಗಿರುವುದು ಒಂದೇ ಒಂದು -

ಅದು ನನ್ನ ಮನ ನೋಡಾ

ಮನದ ಚೆಲುವ ನೀಡಾ,

ಸ್ವತಂತ್ರಧೀರ ಸಿದ್ಧೇಶ್ವರಾ



'ಅಕ್ಷರಗಳಲ್ಲಿ ಅಕಾರ ನಾನು '
ಎಂದಿರುವೆಯಂತೆ ನೀನು;
ಅಂತೆಯೇ, ಅಕಾರವೊಂದನ್ನೇ
ನಂಬಿರುವೆವು ನಾವು !
ಒಳ್ಳೆಯದೆನ್ನುವ ಎಲ್ಲದಕ್ಕೂ -
ಧರ್ಮ, ನೀತಿ, ನ್ಯಾಯ, ಶಾಂತಿ, ಸತ್ಯ ,ಇತ್ಯಾದಿ ಎಲ್ಲದಕ್ಕೂ
ಹಿಂದೆ 'ಅ' ಸೇರಿಸುತ್ತ ಹೊರಟಿಹೆವು!
ಯಾರು ಅಳಿಸಬಲ್ಲವರು
ಈ ಅಕಾರ ಗಳನ್ನು -
ಅವು ಸೃಷ್ಟಿಸಿಹ ವಿಕಾರಗಳನ್ನು,
ಸ್ವತಂತ್ರಧೀರ ಸಿದ್ಧೇಶ್ವರಾ ?




ಕಾವ್ಯಾನಂದ ರ ' ವಚನ ನಂದನ' ದಿಂದ
ಆಯ್ದ ವಚನ

'ನವೀಕರಣ, ನವೀಕರಣ' ವೆಂದು
ನಲುಗುತ್ತಲಿಹರಯ್ಯ ನವಯುವಕರು ;
'ಮಾ  ನವೀಕರಣ, ಮಾ  ನವೀಕರಣ ' ವೆಂದು
ಯಾರೆನ್ನುವರು ?
ನಾನಂತೂ ಎನ್ನಲಾರೆ !
ಆದರೆ, ಮಾನವೀಕರಣ, ಮಾನವೀಕರಣ' ವೆಂದು
ಎನ್ನದಿರಲಾರೆ !
ನವೀಕರಣದೊಡನೆ
ಮಾನವೀಕರಣವೂ ಸಾಗಿದರೆ ಸರಿ
ಇಲ್ಲದಿದ್ದರೆ ಬಲು ಬರಿ!
ನನ್ನ ದೇಶದಲ್ಲಿ ಇವೆರಡೂ
ಒಟ್ಟಿಗೆ ನಡೆಯುವಂತೆ ಮಾಡಾ
ಸ್ವತಂತ್ರಧೀರ ಸಿದ್ಧೇಶ್ವರ!



ಕಾವ್ಯಾನಂದ ರ ವಚನೋದ್ಯಾನ ರಿಂದ
ಆಯ್ದ ವಚನ

ಒಂದೊಂದು ತರದ ಹಕ್ಕಿಯ
ಒಂದೊಂದು ಗರಿ ಸಂಗ್ರಹಿಸಿದರೂ
ಒಂದು ಬೆಟ್ಟವಾಗಬಹುದಯ್ಯ!
ಒಂದೊಂದು ಬಗೆಯ ಮೃಗದ
ಒಂದೊಂದು ಉಗುರು ಶೇಖರಿಸಿದರೂ
ಒಂದೊಂದು ಘಟ್ಟವಾಗಬಹುದಯ್ಯ!
ಒಂದೊಂದು ವಿಧದ ಕೀಟದ
ಒಂದೊಂದು ಪಕ್ಕ ಕ್ರೋಡೀಕರಿಸಿದರೂ
ಒಂದು ತಿಟ್ಟಾಗಬಹುದಯ್ಯ!
ನಿನ್ನ ಜೀವಸೃಷ್ಟಿಯೇ ಇಷ್ಟು ಅದ್ಭುತವಾದುದು,
ಸಸ್ಯ ಸೃಷ್ಟಿಯಂತೂ ಸೋಜಿಗಗಳಲ್ಲಿ ಸೋಜಿಗವಯ್ಯ-
ಸ್ವತಂತ್ರಧೀರ ಸಿದ್ಧೇಶ್ವರಾ!



ನೀನು ವಿಶ್ವತೋಮುಖನಿರುವೆಯಾಗಿ
ನಾನು ನೋಡುವ ಎಲ್ಲ ಮುಖಗಳೂ ನಿನ್ನ ಮುಖಗಳೇ
ನೀನು ಭಕ್ತದೇಹಿಕ ದೇವನಾಗಿ
ನನಗೆ ಕಾಣುವ ಎಲ್ಲ ದೇಹಗಳೂ ನಿನ್ನ ದೇಹಗಳೇ,
ಜಗದ  ಜೀವವೇ ನೀನಾಗಿರುವೆಯಾಗಿ
ಜಗದ ಜೀವಿಗಳೆಲ್ಲ ನಿನ್ನ ಜೀವಂಶಗಳೇ;
ಸ್ವತಂತ್ರಧೀರ ಸಿದ್ಧೇಶ್ವರಾ,
ನೀನು ಸರ್ವಭರಿತ; ಅರಿತರೆ ನಾನೂ ನಿನ್ನಿಂದ ಭರಿತ!



ಕಾವ್ಯಾನಂದ ರ 'ವಚನಾರಾಮ''ದಿಂದ
ಆಯ್ದ ವಚನ (೭೩)

ಚೆಲುವಿನ ಸ್ಪರ್ಧೆ ನಡೆದರೆ ಯಾರು ಗೆಲ್ಲಬಹುದು?
ಚಿಟ್ಟೆಯೆ, ನವಿಲೆ, ಹರಿಣವೆ, ಹೆಣ್ಣೆ, ಹೂವೆ?
ಹೊರಗಿನ ಚೆಲುವನ್ನು ಮಾತ್ರ ಗಮನಿಸಿದರೆ
ಹೆಣ್ಣು ಹೂವುಗಳೇ ಗೆಲ್ಲಬಹುದು ;
ಒಳಗಿನ ಚೆಲುವನ್ನು ಗಮನಿಸಿದರೆ
ಯಾರು ಗೆಲ್ಲುವರೆಂಬುದ ಯಾರು
ಹೇಳಬೇಕಯ್ಯ
ಹೆಣ್ಣು ಮೊದಲ ಸಲ ತಾಯಿಯಾದಾಗ,
ತಿಂಗಳ ಕಂದನ ಎತ್ತಿಕೊಂಡು ನಗುತ್ತ ನಿಂತಾಗ
ಎರಡೂ ಚೆಲುವುಗಳಲ್ಲಿಯೂ
ಅವಳೇ ಗೆಲ್ಲಬಹುದು ನೋಡಾ –
ಸ್ವತಂತ್ರಧೀರ ಸಿದ್ಧೇಶ್ವರಾ !

ಕಾವ್ಯಾನಂದ ರ
'ವಚನೋದ್ಯಾನ ದಿಂದ
ಆಯ್ದ ವಚನ



ಮನೆ ಮನೆಯ ವನಗಳಲ್ಲಿ
ಮನ- ಸುಮಗಳು ಅರಳಲಿ;
ಮನ- ಸುಮಗಳ ಎದೆಗಳಿಂದ
ಸ್ನೇಹ ಬಿಂದು ಉರುಳಲಿ;
ಸ್ನೇಹವೆ ಸಹಕಾರವಾಗಿ
ಸ್ವ- ಪರ ಸುಗತಿ ಮರಳಲಿ;
ಸುಗತಿಯು ಸಂಸ್ಕೃತಿಯ ಗಳಿಸಿ
ಕಾಡುತನವು ತೆರಳಲಿ;
ಸ್ವತಂತ್ರಧೀರ ಸಿದ್ಧೇಶ್ವರಾ,
ನರರ ಚಿತ್ತ ವೃತ್ತಿಯಾಗಿ,
ನರರು ನರರಿಗೆ ನೆರವಾಗಿ,
ನರೋತ್ತಮ ಕುಲವು ಅರಳಲಿ!



ಕಾವ್ಯಾನಂದ ರ
ವಚನ ನಂದನದಿಂದ
ಆಯ್ದ ವಚನ (೪೭೫)

ನೀನು ಸುಖಿಸುವ ರೀತಿಯಲ್ಲಿಯೇ
ನಾನೂ ಸುಖಿಸಬೇಕೇಂಬ
ಹಠವೇಕೆ ನಿನಗೆ ,ಗೆಳೆಯ?
ನೀನು ಮೆಚ್ಚಿದುದನ್ನೇ
ನಾನೂ ಮೆಚ್ಚಬೇಕೆಂಬ
ಛಲವೇಕೆ ನಿನಗೆ, ಕೆಳೆಯ?
ನಿನಗೆ ಬೇಡವಾದುದು
ನನಗೂ ಬೇಡವಾಗಬೇಕೆಂದು
ಕಾಡುವಿಯೇಕೆ, ಸಹೃದಯ?
ನನಗೂ ಒಂದು ರುಚಿ, ರೀತಿ, ನೋಟವನ್ನಿತ್ತಿರುವ
ಸ್ವತಂತ್ರಧೀರ ಸಿದ್ಧೇಶ್ವರಾ!



ಕಾವ್ಯಾನಂದ ರ 'ವಚನ ನಂದನ' ದಿಂದ
ಆಯ್ದ ವಚನ. (೪೪೯)

ಭಾರತದ ಭವ್ಯ ದಿವ್ಯ ದೇಗುಲಕ್ಕೆ
ಹಿಮಗಿರಿಯೇ 'ಮಹತೋ ಮಹೀಯಾನ್' ಗೋಪುರ,
ಉತ್ತುಂಗ ಶೃಂಗಗಳೇ ಸಾಲು ಕಳಸಗಳು!
ಸಂಜೆ ಮುಂಜಾವಿನಲ್ಲಿ ಸ್ವರ್ಣ ಕಳಸಗಳಾಗಿ,
ಬಿಸಿಲು ಬೆಳ್ದಿಂಗಳಲ್ಲಿ ರಜತ ಕಳಸಗಳಾಗಿ,
ಹತ್ತಿರ ಹೋದವರಿಗೆ ಹಿಮ ಕಳಸಗಳಾಗಿ
ಕಂಗೊಳಿಸುವ ಈ ಶೃಂಗ - ಕಳಸಗಳು
ಸಾರುತ್ತಿವೆ ಪ್ರಪಂಚಕ್ಕೆ -
ಔನ್ನತ್ಯ ಸಂಹಿತೆಯ,
ಪಾವಿತ್ರ್ಯ ಸಂದೇಶವ,
ಅವಿನಾಶಿತ್ವದ ಅಂತರ್ವಾಣಿಯ-
ಸ್ವತಂತ್ರಧೀರ ಸಿದ್ಧೇಶ್ವರಾ



ಕಾವ್ಯಾನಂದ ರ 'ವಚನ ನಂದನ' ರಿಂದ
ಆಯ್ದ ವಚನ (೨೬೧)

ಕಾಲಾಶ್ರಿತ ಕಲೆಗಳನ್ನು
ಸ್ಥಲಾಶ್ರಿತ ಕಲೆಗಳನ್ನಾಗಿಸಿದ
ವಿಜ್ಞಾನಿಗೆ ನಮೋ;
ಸ್ಥಲಾಶ್ರಿತ ಕಲೆಗಳನ್ನು
ಸರ್ವಸ್ಥರೀಯ ಕಲೆಗಳನ್ನಾಗಿಸಿದ
ತಂತ್ರಜ್ಞಾನಿಗೆ ನಮೋ;
ಸಿರಿವಂತರ ಸೊತ್ತಾಗಿದ್ದ ಕಲೆಗಳನ್ನು
ಸಾಮಾನ್ಯರ ತುತ್ತಾಗಿಸಿದ
ಯಂತ್ರಜ್ಞಾನಿಗೆ ನಮೋ;
ಅಗಮ್ಯ ಸ್ವತಂತ್ರಧೀರ ಸಿದ್ಧೇಶ್ವರರನ್ನು
ಅನುಭಾವಗಮ್ಯಗೊಳಿಸಿದ ಆತ್ಮಜ್ಞಾನಿಗೆ ನಮೋ !



ಕಾವ್ಯಾನಂದ ರ ವಚನರಾಮ ರಿಂದ
ಆಯ್ದ ವಚನ ( ೨೯೮)

ಮಣ್ಣಿಲ್ಲದ ಮೂರ್ತಿಗಳನ್ನು ಮಾಡುವುದು ಮನಸ್ಸು

ಬಣ್ಣವಿಲ್ಲದ ಚಿತ್ರಗಳನ್ನು ಮೂಡಿಸುವುದು ಮನಸ್ಸು

ಶೂನ್ಯದಲ್ಲಿಯೇ ಪೂರ್ಣವನ್ನು ರೂಢಿಸುವುದು ಮನಸ್ಸು

ಸೃಷ್ಟಿಕರ್ತನನ್ನೆ ಸೆರೆ ಹಿಡಿಯುವುದು ಮನಸ್ಸು !

ಮನಸ್ಸು ಎಚ್ಚರಿದ್ದಾಗ ಎಲ್ಲ ತೇಜಸ್ಸು,

ಮನಸ್ಸು ಮಲಗಿದ್ದಾಗ ಎಲ್ಲ ತಮಸ್ಸು!

ಮನಸ್ಸೇ ಮನುಷ್ಯ

ಸ್ವತಂತ್ರಧೀರ ಸಿದ್ಧೇಶ್ವರ !



ಕಾವ್ಯಾನಂದ ರ ' ವಚನ ನಂದನ'ದಿಂದ
ಆಯ್ದ ವಚನ (೨೦೧)

ವಿಜಯಗಳಲ್ಲಿ ವಿಜಯ ಮನೋವಿಜಯ,
ಪರಿವರ್ತನೆಗಳಲ್ಲಿ ಹಿರಿದು ಹೃದಯಪರಿವರ್ತನೆ ,
ಕ್ರಾಂತಿಗಳಲ್ಲಿ ಹಿರಿದು ವಿಚಾರಕ್ರಾಂತಿ,
ಕಲೆಗಳಲ್ಲಿ ಹಿರಿದು ಜೀವನಕಲೆ,
ಭಾಷೆಗಳಲ್ಲಿ ಹಿರಿದು ಮಾತೃಭಾಷೆ,
ಭೂಮಿಗಳಲ್ಲಿ ಹಿರಿದು ಮಾತೃಭೂಮಿ,
ಹೃದಯಗಳಲ್ಲಿ ಹಿರಿದು ಮಾತೃ ಹೃದಯ,
ಶಕ್ತಿಗಳಲ್ಲಿ ಹಿರಿದು ಆತ್ಮಶಕ್ತಿ,
ಮುಕ್ತಿಗಳಲ್ಲಿ ಹಿರಿದು ಜೀವನ್ಮುಕ್ತಿ,
ಸ್ವತಂತ್ರಧೀರ ಸಿದ್ಧೇಶ್ವರಾ,
ಮತಗಳಲ್ಲಿ ಹಿರಿದು ಮನುಜಮತ !



ಕಾವ್ಯಾನಂದ ರ 'ವಚನೋದ್ಯಾನ' ದಿಂದ
ಆಯ್ದ ವಚನ (೩೦೪)

ಬಳ್ಳಿಗಳೆ, ಕುಸುಮಗಳೇ ನಿಮ್ಮ ಕನಸುಗಳೆ ?
ಮರಗಳಿಗೆ, ಸುಫಲಗಳೇ ನಿಮ್ಮ ಕನಸುಗಳೆ ?
ನಕ್ಷತ್ರಗಳೆ ಕಿರಣಗಳೇ ನಿಮ್ಮ ಕನಸುಗಳೆ?
ತೊರೆಗಳೆ ತೆರೆಗಳೇ ನಿಮ್ಮ ತರಳರೆ ?
ಗಿರಿಗಳೆ, ಶಿಖರಗಳೇ ನಿಮ್ಮ ಸಂತಾನವೆ ?
ನೋಡಿದಷ್ಟೂ ನವ್ಯೋನಯ
ಎನಿದ್ಯೆಸಿರಿ ಶಿವ ಶಿವ !
ಸ್ವತಂತ್ರಧೀರ ಸಿದ್ಧೇಶ್ವರನೆಂದ
ಪುನರ್ನವ ಪುನರ್ನವ.



ಕಾವ್ಯಾನಂದ ರ ವಚನರಾಮ ದಿಂದ
ಆಯ್ದ ವಚನ (೧೮೩)

ಅವರಿವರು ಕೇಡು ಮಾಡಿದರೆಂದು
ಮಾನವ ದ್ವೇಷಿಯಾಗದಿರು ಮನವೆ;
ಅವರಿವರು ಮೋಸಗೊಳಿಸಿದರೆಂದು
ಸಂಶಯ ಪಿಶಾಚಿಯಾಗದಿರು, ಮನವೆ;
ಅವರಿವರು ಆಡಿಕೊಂಡರೆಂದು
ನಿಂದಕ, ದೂಷಕನಾಗದಿರು, ಮನವೆ;
ಸ್ವತಂತ್ರಧೀರ ಸಿದ್ಧೇಶ್ವರನ
ಕಳ್ಳ ಭಕ್ತರೇ ಸುತ್ತುವರಿದರೆಂದು
ಅವನನ್ನೆ ತೊರೆಯಬೇಡ ಮನವೆ!



ಸಿದ್ದಯ್ಯ ಪುರಾಣಿಕರ 'ವಚನಾರಾಮ' ದಿಂದ
ಆಯ್ದ ವಚನ (೨೯)

ಪ್ರೀತಿಸುವ ಹೃದಯವೊಂದಿದ್ದರೆ ಎಲ್ಲ ಇದ್ದ ಹಾಗೆ-
ಅದಿಲ್ಲದಿದ್ದರೆ ಎಲ್ಲ ಇದ್ದೂ ಇಲ್ಲದಂತಯ್ಯಾ !
ಸತ್ಯದರ್ಶನ ಸ್ನಿಗ್ಧ ಹೃದಯದ ಮೂಲಕ,
ಶಿವದ ಸಂಪಾದನೆ ಶುದ್ಧ ಹೃದಯದ ಮೂಲಕ
ಸುಂದರದ ಸಾಧನೆ ಸಮೃದ್ಧ ಹೃದಯದ ಮೂಲಕ,
ಧರ್ಮ ಪರಿಪಾಲನೆ ಪ್ರಬುದ್ಧ ಹೃದಯದ ಮೂಲಕ,
ಶಾಸನ ಸಹಕಾರಗಳ ಸಫಲತೆ ಸನ್ನದ್ಧ ಹೃದಯಗಳ ಮೂಲಕ,
ಜೀವನದ ಸಾರ್ಥಕತೆಯೇ ಸದುಹೃದಯದಿಂದಯ್ಯಾ!
ಗುರಿಗಳಲ್ಲಿ ಗುರಿ ಸಹೃದಯರ ಸೃಷ್ಟಿ;
ಸಾಧನಗಳಲ್ಲಿ ಸಾಧನ ಹೃದಯದ ದೃಷ್ಟಿ!
ಸಿರಿವಂತಿಕೆಯನ್ನು ನೀಡು,ಬಿಡು-
ಹೃದಯವಂತಿಕೆಯನ್ನು ಬಿಡದೆ ಕೊಂಡು,
ಸ್ವತಂತ್ರಧೀರ ಸಿದ್ಧೇಶ್ವರಾ!

ಕಾವ್ಯಾನಂದ ರ
"ವಚನೋದ್ಯಾನ' ದಿಂದ
ಆಯ್ದ ವಚನ (೨೯೭)



ಕಡೆದರೆ ಬೆಣ್ಣೆ, ಕಟೆದರೆ ಮೂರ್ತಿ,
ಒಕ್ಕಿದರೆ ಕಾಳು, ಹಿಕ್ಕಿದರೆ ಕೇಶಗಳಯ್ಯ;
ಅಟ್ಟರೆ ಅಡುಗೆ, ಸುಟ್ಟರೆ ಭಸ್ಮ
ನೆಟ್ಟರೆ ಸಸಿ, ಇಟ್ಟರೆ  ಒಡವೆಗಳಯ್ಯ;
ಉರಿದರೆ ದೀಪ, ಉರಿಸಿದರೆ ಧೂಪ,
ತೆಯ್ದರೆ ಗಂಧ, ನೆಯ್ದರೆ ವಸ್ತ್ರವಯ್ಯ;
ಸ್ವತಂತ್ರಧೀರ ಸಿದ್ಧೇಶ್ವರಾ,
ತಾಳಿದರೆ ಬಾಳು, ದುಡಿದರೆ ಪಾಲು,
ಕೀಳೊಪ್ಪೆ ಮೇಲು, ಕೊಡದಿಹುದೆ ಹಾಳು ಕಂಡಯ್ಯ



ಸಿದ್ದಯ್ಯ ಪುರಾಣಿಕ ರ 'ವಚನೋದ್ಯಾನ'ದಿಂದ
ಆಯ್ದ ವಚನ (೩೬೩)



ಸಿದ್ದಯ್ಯ ಪುರಾಣಿಕ ರ
'ವಚನ ನಂದನ' ದಿಂದ
ಆಯ್ದ ವಚನ (೪೪೨)

ಒಂದು ಒಳ್ಳೆಯ ಮಾತು,
ಒಂದಿಷ್ಟು ಪ್ರೀತಿಯ ಸ್ವಾಗತ,
ಒಂದು ಸದ್ಭಾವದ ಸ್ಮಿತ-
ಆಗತರಿಗೆ ಎಷ್ಟು ಹಿತ!
ವೆಚ್ಚವಿಲ್ಲದ ಹಿಗ್ಗು ಹೆಚ್ಚಿಸುವ ಸಾಧನಗಳಿವು,
ಜೀವನೋನ್ನತಿಯ ಸೋಪಾನಗಳಿವು!
ಇದಕ್ಕೂ ಅಭಾವ ಬಂದಿತಲ್ಲ -
ಇವನ್ನೂ ದುರ್ಭಾವ ತಿಂದು ತೇಗಿತಲ್ಲ,
ಸ್ವತಂತ್ರಧೀರ ಸಿದ್ಧೇಶ್ವರ ?



ಸಿದ್ದಯ್ಯ ಪುರಾಣಿಕ ರ
ವಚನೋದ್ಯಾನ ದಿಂದ
ಆಯ್ದ ವಚನ (೪೨೫)

ಸೂರ್ಯ ಬರುವಾಗ ಸದ್ದಿಲ್ಲ, ಗದ್ದಲಿಲ್ಲ
ಸಿಡಿಲು ಬರುವಾಗ ಕಿವಿಗಡಚಿಕ್ಕುವುವಯ್ಯಾ;
ಶಶಿ ಬರುವಾಗ ತುಸುವೂ ತೊಂದರೆಯಿಲ್ಲ
ಮಿಂಚು ಹೊಯ್ಯಾಗ ಕಣ್ಣು ಕುಕ್ಕುವುದಯ್ಯಾ
ಸುಗ್ಗಿ ಬರುವಾಗ ಸ್ವಲ್ಪವೂ ಕೋಟಲೆಯಿಲ್ಲ,
ಮಾಗಿ ಬರುವಾಗ ತರಗೆಲೆ- ಸರಿ,
ಮರ್ಮರ ಸ್ವರವಯ್ಯಾ ;
ಸ್ವತಂತ್ರಧೀರ ಸಿದ್ಧೇಶ್ವರಾ,
ಬಲ್ಲವರು ಇರುವಲ್ಲಿ ಎಳ್ಳನಿತೂ ಸೊರಹಿಲ್ಲ,
ಗಾಂಪರಿರುವಲ್ಲಿ ರಂಪ ಬಹಳವಯ್ಯಾ !

ಎಲ್ಲ ತನುಗಳ ಮನೆಗಳ ಒಳಗಡೆಗೆ
ನಿನ್ನ ಕರುಣೆಯ ಕಿರಣ ಪ್ರವೇಶಿಸಲಿ ;
ಎಲ್ಲ ಮನಗಳ ಕಟ್ಟೆ ಕೆರೆಗಳಿಗೆ
ನಿನ್ನ ಒಲವಿನ ಹೊನಲು ಪ್ರವಹಿಸಲಿ;
ಎಲ್ಲ ಮಸ್ತಕಗಳ ಮಡಿಹೊಲಗಳಲ್ಲಿ
ನಿನ್ನ ಭಕ್ತಿಯ ಬೀಜಾರೋಪಣವಾಗಲಿ ;
ಎಲ್ಲ ಹಸ್ತಗಳ ಕೆಲಸ ಕಾರ್ಯಗಳಲ್ಲಿ
ನಿನ್ನ ಪೂಜೆಯ ಪುಣ್ಯ ಪ್ರಕರ್ಷಿಸಲಿ ;
ಎಲ್ಲ ನಾಸಿಕಗಳಲ್ಲಿ
ನಿನ್ನ ನೆನಹು ಉಸಿರಾಗಲಿ ;
ಎಲ್ಲ ಕರ್ಣಗಳಲ್ಲಿ
ನಿನ್ನ ಕರೆ ಕೇಳುವ ಶಕ್ತಿ ಬರಲಿ;
ಎಲ್ಲ ಆಕ್ಷಿಗಳಲ್ಲಿ
ನಿನ್ನ ವೀಕ್ಷಣಾಕಾಂಕ್ಷೆ ಬೆಳಕಾಗಲಿ ;
ಎಲ್ಲೆಡೆಯೊಳಗಿರುವ ನೀನು
ಎಲ್ಲರೊಳು ದಿವ್ಯ ಪ್ರೇರಣೆಯಾಗಿ
ನನ್ನಿ, ನಲ್ಮೆಯ ಚೆಲುವು, ನಲಿವುಗಳ
ಸುಗ್ಗಿಯನೆ ಬರಿಸಯ್ಯ -
ಸ್ವತಂತ್ರಧೀರ ಸಿದ್ಧೇಶ್ವರಾ !



ಸಿದ್ದಯ್ಯ ಪುರಾಣಿಕ ರ
ವಚನೋದ್ಯಾನ ದಿಂದ
ಆಯ್ದ ವಚನ (೫೧೪)

ನಿನ್ನ ನ್ಯಾಯಾಧೀಶ ನೀನೆ, ಸಾಕ್ಷಿಯು ನೀನೆ,

ಉನ್ನತೋನ್ನತ ನ್ಯಾಯಪೀಠವೂ ನೀನೆ !

ನಿನ್ನ ತೀರ್ಪನು ನೀನೆ ಬರೆಯಬೇಕಿಲ್ಲಿಯೇ,

ಇನ್ನಾರು ಬರೆದಾರು - ಮರುಳಸಿದ್ಧ



ಸಿದ್ದಯ್ಯ ಪುರಾಣಿಕ ರ
ಮರುಳ ಸಿದ್ದನ ಕಂತೆಯಿಂದ ಆಯ್ದದ್ದು (೨೪೧)

ಇನ್ನೇನು ಮಾಡದಿದ್ದರೂ
ಸಂಯಮಿಯನ್ನಾಗಿ ಮಾಡಯ್ಯ ಎನ್ನನ್ನು !
ಸಂಯಮವಿಲ್ಲದ ಪ್ರೇಮ ಕಾಮ ,
ಸಂಯಮವಿಲ್ಲದ ಭೋಗ ರೋಗ ,
ಸಂಯಮವಿಲ್ಲದ ದಾನ ದುಂದು ,
ಸಂಯಮವಿಲ್ಲದ ಮಾತು ಮಾರಿ ,
ಸಂಯಮವಿಲ್ಲದ ಸ್ವಾತಂತ್ರ್ಯ ಸ್ವೈರವೃತ್ತಿ ,
ಸಂಯಮವಿಲ್ಲದ ಬರವಣಿಗೆ ಉರುವಣಿಗೆ ,
ಸಂಯಮವಿಲ್ಲದ ಸದ್ಗುಣವೂ ದುರ್ಗುಣ
ಅಡಕವಿಲ್ಲದಲ್ಲಿ ಕೆಡುಕು, ತೊಡಕು !
ಇನ್ನೇನ ಮಾಡದಿದ್ದರೂ
ಸಂಯಮಿಯನ್ನು ಮಾಡಯ್ಯ ನನ್ನನ್ನು-
ಸ್ವತಂತ್ರಧೀರ ಸಿದ್ಧೇಶ್ವರಾ !

